ಗಿಡ) ಪೊದೆಯಲ್ಲಿ ಅಡಗಿಕೊಂಡಿರುತ್ತೇನೆ. ನೀವಿಬ್ಬರೂ ಅಲ್ಲಿಗೆ ಬನ್ನಿ. ನಂತರ ಮೂವರೂ ಇಲ್ಲಿಯ ಬಯಲನ್ನು ದಾಟೋಣ. ಅಲ್ಲಿ ಹುಲ್ಲು ಒಣಗಿದ್ದು ದಟ್ಟವಾಗಿ ಬೆಳೆದಿದೆ. ಬರುವಾಗ ಒಂದು ಪಂಜನ್ನು ಜೊತೆಗೆ ತನ್ನಿ. ನಾವು ಬಯಲನ್ನು ದಾಟುತ್ತಿದ್ದಂತೇ ಅದನ್ನು ಹಿಂದಕ್ಕೆ ಎಸೆಯೋಣ. ಆಗ ಹುಲ್ಲೆಲ್ಲಾ ಸುಟ್ಟು ಹೋಗಿ ನಮ್ಮ ಹೆಜ್ಜೆಗುರುತು ಮಾಯವಾಗುತ್ತದೆ. ಆಗ ಯಾರಿಗಾದರೂ ನಮ್ಮನ್ನು ಹಿಂಬಾಲಿಸುವುದು ಅಸಾಧ್ಯ. ಅಲ್ಲಿಂದ ನಾವು ದೊಡ್ಡ ನದಿಗೆ ಹೋಗೋಣ. ಅಲ್ಲಿ ನನ್ನ ಸ್ನೇಹಿತ ಒಂದು ಗೂಂಬೀಲ್ಲಾ(ತೊಗಟೆಯಿಂದ ಮಾಡಿದ ದೋಣಿ)ದೊಡನೆ ಸಿದ್ಧನಾಗಿರುತ್ತಾನೆ. ಅವನು ನಮ್ಮನ್ನು ಆಕಡೆಯ ತೀರಕ್ಕೆ ಕರೆದೊಯ್ಯುತ್ತಾನೆ. ನಂತರ ನಾವೆಲ್ಲಾ ಕ್ಷೇಮವಾಗಿರುತ್ತೇವೆ. ಅಲ್ಲಿಂದ ನಾವು ಮನಸ್ಸು ಬಂದಂತೆ ಎಲ್ಲಿಗೆ ಬೇಕಾದರೂ ಹೋಗಬಹುದು. ಚಿಕ್ಕ ಕೈಗಳಿರುವ ಮಂದಿ (ಹಲ್ಲಿಗಳು?) ಇರುವ ನಾಡಿಗೆ ಕೂಡ!''

ಮರುದಿನ ಬೆಳಗ್ಗೆ ಗೌಗೌರ್ಗಾ (ಆಸ್ಟ್ರೇಲಿಯಾದಲ್ಲಿ ಭಾರಿ ಗಾತ್ರದ, ಕರಾಳವಾಗಿ ಕೇಕೆ ಹಾಕುವ ಕೊಕ್ಕರೆ. ಇದರ ಕೂಗು ಬೆಳಗಾಗಿದ್ದನ್ನು ಸೂಚಿಸುತ್ತದೆ) ಎದ್ದು ತನ್ನ ನಗುವನ್ನು ಮುಗಿಸುವ ಮುನ್ನವೇ ವೀಡಾ ಹೊರಟಿದ್ದ. ತುಸು ಸಮಯದ ನಂತರ ಬುಲ್ಪೈ ಬುಲ್ಪೈ ಸೋದರಿಯರು ಗಿಡ್ಯಾ ಪೊದೆಯ ಬಳಿ ಬಂದು ಅವನನ್ನು ಸಂಧಿಸಿದರು.

